ತುಂಬುವುದು ಮತ್ತು ರೀಕಾರ್ಪೆಂಟಿಂಗ್ ಮಾಡುವುದು. ಕೆಲವು ಭಾಗಗಳಲ್ಲಿ ರೀಕಾರ್ಪೆಟಿಂಗ್ ಮಾಡುತ್ತೇವೆ. ಇನ್ನು ಹೊಸದಾಗಿ 50 ಕಿಲೋ ಮೀಟರ್ ಪ್ರತಿ ವಿಧಾನ ಸಭಾ ಕ್ಷೇತ್ರದಿಂದ, ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳತಕ್ಕ, ನಬಾರ್ಡ್ ರಸ್ತೆ ಯೋಜನೆಯಲ್ಲಿ ಆ ರಸ್ತೆಗಳನ್ನು ಹೊಸದಾಗಿ ನಿರ್ಮಾಣ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ದಿಸೆಯಲ್ಲಿ ಇಷ್ಟೊಂದು ಹಣವನ್ನು ಖರ್ಚು ಮಾಡಿ ಈ ರಾಜ್ಯದ ರಸ್ತೆಗಳ ದುರಸ್ತಿ ಆಗಿರುವುದು ಮತ್ತು ಅದರ ಮೇಂಟೆನೆನ್ಸ್ ತೆಗೆದುಕೊಳ್ಳುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ತಮ್ಮ ಮುಖೇನ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಡಾಂಬರೀಕರಣ ಆಗಲಿಲ್ಲ. ಕಳೆದ ಮೂರು ವರ್ಷದಿಂದ ನಾವು ಪ್ರತಿ ಒಂದು ವರ್ಷಕ್ಕೆ ಇಂತಿಷ್ಟು ರಸ್ತೆಗೆ ಇಂತಿಷ್ಟು ಕಿಲೋ ಮೀಟರ್ ಡಾಂಬರೀಕರಣ ಮಾಡಬೇಕೆಂದು ಮನವಿಯನ್ನು ಮುಂಚಿನ ಮಂತ್ರಿಗಳಿಗೆ ಕೊಟ್ಟಿದ್ದೇವೆ. ಇಷ್ಟರವರೆಗೆ ಒಂದು ಕಿಲೋ ಮೀಟರ್‌ವರೆಗೆ ಡಾಂಬರೀಕರಣ ಆಗಿಲ್ಲ ಎಂಬ ಪ್ರಸ್ತಾವನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಕಳೆದ ಮೂರು ವರ್ಷಗಳಿಂದ ಹೊಸ ರಸ್ತೆಗಳಿಗೆ, ಅದೂ ಲೋಕೋಪಯೋಗಿ ಇಲಾಖೆಯ ರಸ್ತೆಗಳು, ಅದಕ್ಕೆ ಡಾಂಬರೀಕರಣ ಮಾಡಲಿಲ್ಲ. ಅದಕ್ಕೆ ನಾನು ಹೇಳುತ್ತಿರುವುದು. ನನ್ನ ಜನರು ಅಲ್ಲಿ ಕಲ್ಲು ಎಸೆಯುತ್ತಿದ್ದಾರೆ. ಸಾರ್ವಜನಿಕ ಹತ್ತಿರ ನಾವು ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ : ಪ್ಲಾನ್‌ನ ಬಜೆಟೆಡ್‌ನಲ್ಲಿ ನಾವು ಹೊಸದಾಗಿ ರಸ್ತೆಗಳನ್ನು ನಿರ್ಮಾಣ ಮಾಡುವಲ್ಲಿ 208 ಕಿಲೋ ಮೀಟರ್‌ನಷ್ಟು ರಸ್ತೆಯನ್ನು ಮಾಡಿದ್ದೇವೆಂದು ಹೇಳಿದ್ದೇವೆ. ಇನ್ನು ನಾನ್ ಪ್ಲಾನ್‌ನಲ್ಲಿ ರೀಕಾರ್ಪೆಟಿಂಗ್ ಮಾಡಲು ಅರ್ಧ ದುಡ್ಡನ್ನು ರಿನ್ಯೂವಲ್‌ಗೋಸ್ಕರ, ಇದ್ದಂತಹ ರಸ್ತೆಗಳನ್ನು ರೀಕಾರ್ಪೆಟಿಂಗ್ ಮಾಡುವುದು, ಇನ್ನು ಅರ್ಧ ದುಡ್ಡಿನಲ್ಲಿ ಗುಂಡಿಗಳನ್ನು ಮುಚ್ಚುವುದು ಅಥವಾ ಬದಿಗಳನ್ನು ತುಂಬುವಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಆ ದಿಸೆಯಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಪರ್ಟಿಕ್ಯುಲರ್ ಆಗಿ ಆ ರಸ್ತೆ ಆಗಿಲ್ಲ ಎಂದು ಕೇಳಿದರೆ ನಾನು ರಾಜ್ಯಾದಂತ ಬೇರೆ ಪ್ರಶ್ನೆಗೆ ಉತ್ತರ ಒದಗಿಸುತ್ತಿದ್ದೇವೆ. ಪರ್ಟಿಕ್ಯುಲರ್ ಆಗಿ ಅವರ ಕ್ಷೇತ್ರದಲ್ಲಿ ಎಷ್ಟೆಷ್ಟು ಮಾಡಿದ್ದೀರಿ ಎಂಬ ಬಗ್ಗೆ ನಾನು ಸರಿಯಾದ ಮಾಹಿತಿಯನ್ನು ತರಿಸಿ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆಂದು ತಮ್ಮ ಮೂಲಕ ಹೇಳಲು ಇಷ್ಟಪಡುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಆನೆ ತುಳಿತದಿಂದ ಸತ್ತವರಿಗೆ ಪರಿಹಾರ

126 (681) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಆನೆ ತುಳಿತದಿಂದ ಸತ್ತವರ ಸಂಖ್ಯೆ ಎಷ್ಟು ?

2) ಅದರಿಂದ ಆಸ್ತಿಪಾಸ್ತಿಗೆ ಆದ ನಷ್ಟ ಎಷ್ಟು ; ಆ ಬಗ್ಗೆ ಪರಿಹಾರ ಕೊಡಲಾಗಿದೆಯೇ ಹಾಗಿದ್ದಲ್ಲಿ ಆ ತಾಲ್ಲೂಕುಗಳ ವಿವರ ನೀಡುವುದು.

3) ಆನೆಗಳು ಅರಣ್ಯದಿಂದ ಊರಿನೊಳಗೆ ಬರುವುದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) :

1.

1996-97	1997-98	1998-99
2	3	6

2.

	1996-97		97-98		1998-99	
	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
ವಿರಾಜಪೇಟೆ	83	1,22,250-00	144	2,37,450-00	86	3,59,230-00
ಮಡಿಕೇರಿ	179	1,62,850-00	163	62,250-00	142	96,300-00
ಸೋಮವಾರಪೇಟೆ	301	2,13,625-00	201	3,06,300-00	129	2,10,050-00

3. ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ, ಸೌರಶಕ್ತಿ ವಿದ್ಯುತ್ ಬೇಲಿ ಹಾಗೂ ಆನೆ ನಿರೋಧಕ ಕಂದಕಗಳನ್ನು ಈ ಕೆಳಗೆ ಕೊಟ್ಟಿರುವ ವಿವರಗಳಂತೆ ನಿರ್ಮಿಸಲಾಗಿದೆ.

ವಿಭಾಗದ ಹೆಸರು	ಸೌರ ವಿದ್ಯುತ್ ಬೇಲಿ	ಆನೆ ನಿರೋಧಕ ಕಂದಕ
ವಿರಾಜಪೇಟೆ	16.62 ಕಿ.ಮಿ. ರೂ. 10,45,000-00	20.44 ಕಿ.ಮಿ. ರೂ. 25,37,000-00
ಮಡಿಕೇರಿ	15.40 ಕಿ.ಮಿ ರೂ. 10,00,000-00	34.05 ಕಿ.ಮಿ ರೂ. 43,75,232-00
ಒಟ್ಟು	32.02 ಕಿ.ಮಿ ರೂ. 20,45,000-00	54.49 ಕಿ.ಮಿ ರೂ. 69,12,232-00

11.50 ಪಿ.ಎಂ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ವರ್ಷೇ ವರ್ಷೇ ಕಳೆದಂತೆ ಆನೆ ತುಳಿತಕ್ಕೆ ಒಳಗಾಗಿ ಸತ್ತವರ ಸಂಖ್ಯೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆದರೆ, ಪರಿಹಾರ ಕೊಟ್ಟಿರುವುದು ಕಡಿಮೆಯಾಗಿದೆ. ಆನೆ ತುಳಿತಕ್ಕೊಳಗಾಗಿ ಸತ್ತವರ ಕುಟುಂಬಕ್ಕೆ ತಾವು ಸರ್ಕಾರದಿಂದ ಎಷ್ಟು ಮೊತ್ತದ ಪರಿಹಾರ ಕೊಡುತ್ತೀರಿ ಹಾಗೂ ಆನೆ ಹಾವಳಿ ತಡೆಗಟ್ಟಲು ಶಾಶ್ವತವಾದ ಯಾವ ರೀತಿಯ ಕ್ರಮ ಕೈಗೊಂಡಿದ್ದೀರೆಂಬುದನ್ನು ತಿಳಿಸಬೇಕು.

ಶ್ರೀ ಡಿ.ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಆನೆ ತುಳಿತಕ್ಕೊಳಗಾಗಿ ಸತ್ತವರ ಕುಟುಂಬಗಳಿಗೆ ಹಿಂದೆ ಇಪ್ಪತ್ತೈದು ಸಾವಿರ ರೂಪಾಯಿಯಷ್ಟು ಪರಿಹಾರ ಕೊಡಲಾಗುತ್ತಿತ್ತು. ಈಗ ಅದನ್ನು ಒಂದು ಲಕ್ಷ ರೂಪಾಯಿವರೆಗೆ ಜಾಸ್ತಿ ಮಾಡಿದ್ದೇವೆ. 1998-99ರಲ್ಲಿ ಆನೆ ತುಳಿತಕ್ಕೆ ಸಿಕ್ಕಿ ಸತ್ತ ಆರು ಜನರ ಪೈಕಿ ಮೂರು ಜನರಿಗೆ ಈಗಾಗಲೇ ತಲಾ ಒಂದು ಲಕ್ಷ ರೂಪಾಯಿಯಂತೆ ಪರಿಹಾರ ಕೊಟ್ಟಿದ್ದು, ಉಳಿದ ಮೂರು ಜನರಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಕೇಳಿರುವುದರಿಂದ ಅದನ್ನು ಒದಗಿಸಿಕೊಟ್ಟರೆ ತಕ್ಷಣ ಪರಿಹಾರ ಹಣವನ್ನು ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ನಮ್ಮ ಕೊಡಗಿನಲ್ಲಿ ಆನೆ ಹಾವಳಿ ತುಂಬಾ ಹೆಚ್ಚಾಗಿದ್ದು, ಆನೆ ತುಳಿತಕ್ಕೊಳಗಾಗಿ ಸತ್ತವರಿಗೆ ಪರಿಹಾರವನ್ನು ಸರಿಯಾಗಿ ಕೊಡುತ್ತಿಲ್ಲ. ಒಂಟಿ ಸಲಗವನ್ನು ಹಿಡಿಯಲು ದೆಹಲಿಯಿಂದ ಅನುಮತಿ ಬರಬೇಕೆಂದು ಹೇಳುವಂಥ ಪರಿಸ್ಥಿತಿ ಕೊಡಗಿನಲ್ಲಿದೆ. ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ತಾವು ಹೇಳಲಿಲ್ಲ.

ಶ್ರೀ ಡಿ.ಮಂಜುನಾಥ್ : ತಾವು ಹೇಳಿರುವಂತೆ ಅದಕ್ಕೆ ದೆಹಲಿಯಿಂದ ಅನುಮತಿ ಏನೂ ಬೇಕಾಗಿಲ್ಲ. ನಮ್ಮ ಅರಣ್ಯ ಇಲಾಖೆಯ ಸಿಬ್ಬಂದಿಯೇ ಒಂಟಿ ಸಲಗವನ್ನು ಹಿಡಿಯುತ್ತಾರೆ. ಈಗ ಶಾಶ್ವತವಾದ ಕಂದಕ ನಿರ್ಮಾಣ ಮಾಡಬೇಕಿರುವುದರಿಂದ ಅದಕ್ಕೆ ಹೆಚ್ಚು ಹಣ ಬೇಕಾಗುತ್ತದೆ. ಅದಕ್ಕೋಸ್ಕರ ನಾನು ಇಂದು ಬೆಳಿಗ್ಗೆ ಈ ಕುರಿತು ಮಾನ್ಯ ಹಣಕಾಸು ಸಚಿವರ ಹತ್ತಿರ ಮಾತನಾಡಿದ್ದೇನೆ. ಕಾಡಾನೆಗಳು ಯಾವ ಸಮಯದಲ್ಲಿ ಬರುತ್ತವೆ, ಹೋಗುತ್ತವೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ, ಕಾಡಾನೆಗಳು ಇರುವ ಸ್ಥಳಗಳಲ್ಲಿ ಶಾಶ್ವತವಾದ ಕಂದಕ ನಿರ್ಮಾಣ ಮಾಡಬೇಕಾಗುತ್ತದೆ. ಕಂದಕಗಳ ನಿರ್ಮಾಣ ಮಾಡಿದ್ದು ಇದಕ್ಕಾಗಿ 69 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಕಾಡಿಗೆ ಬೆಂಕಿ ಬಿದ್ದಿರುವುದರಿಂದ ಆನೆಗಳೆಲ್ಲವೂ ಊರಿನಲ್ಲಿದ್ದು, ಇವುಗಳ ಹಾವಳಿಯನ್ನು ತಡೆಗಟ್ಟುವುದಕ್ಕೆ ತಾವು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆನೆ ಹಾವಳಿಯಿಂದಾಗಿ ಸುಮಾರು ಹತ್ತು ಕೋಟಿ ರೂಪಾಯಿಗಳಷ್ಟು ನಷ್ಟವಾಗಿರಬಹುದು. ಆದರೆ, ಸನ್ಮಾನ್ಯ ಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದು ಕೇವಲ ಐದು ಲಕ್ಷ ರೂಪಾಯಿಗಳಷ್ಟು ಹಾನಿಯುಂಟಾಗಿದೆಯೆಂದು ತಿಳಿಸಿದ್ದಾರೆ. ಆನೆ ಹಾವಳಿಯಿಂದ ಒಂದು ಕೋಟಿ ರೂಪಾಯಿಗೂ ಮೇಲ್ಪಟ್ಟು ಹಾನಿಯಾಗಿದ್ದರೆ ಮಾನ್ಯ ಮಂತ್ರಿಗಳು ತಮ್ಮ ಸಚಿವ ಪದವಿಗೆ ರಾಜೀನಾಮೆ ಕೊಡುತ್ತಾರೆಯೇ ಎಂಬುದನ್ನು ಕೇಳಿ. ಅಷ್ಟು ಮೊತ್ತದಷ್ಟು ಹಾನಿಯಾಗಿಲ್ಲವೆಂದರೆ ನಾನು ಶಾಸಕ

ಪದವಿಗೆ ರಾಜೀನಾಮೆ ಕೊಡುತ್ತೇನೆ. ಬಹಳಷ್ಟು ಹಾನಿಯಾಗಿರುವ ಬಗ್ಗೆ ನಾನು ಅಲ್ಲಿನ ಡಿ.ಎಫ್.ಓ. ಅವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದಾಗ ನಿಮಗೇನು ಅದನ್ನು ನಾವು ನೋಡಿಕೊಳ್ಳುತ್ತೇವೆ ಎಂದು ಹೇಳುವಂಥ ಪರಿಸ್ಥಿತಿ ಇದೆ.

ಶ್ರೀ ಬಿ.ಬಿ.ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಪರಿಹಾರದ ಬಗ್ಗೆ ನಾನು ಹಿಂದೆ ಒಂದು ಸಾರಿ ಪ್ರಸ್ತಾಪಿಸಿದ್ದೆ. ಆನೆ ತುಳಿತಕ್ಕೊಳಗಾಗಿ ಸತ್ತವರಿಗೆ ಒಂದು ಲಕ್ಷ ರೂಪಾಯಿಯಷ್ಟು ಪರಿಹಾರ ಕೊಡುತ್ತಿದ್ದೇವೆಂದು ಸಚಿವರು ಹೇಳಿದ್ದಾರೆ. ಆದರೆ, ನಾನು ತಿಳಿಸುವುದೇನೆಂದರೆ, ಆನೆ ಒಬ್ಬರನ್ನು ತುಳಿದಾಗ ಅವರ ಗ್ರಹಚಾರ ಸರಿಯಿದ್ದರೆ ಪ್ರಾಣಪಾಯದಿಂದ ಪಾರಾಗಿ ಕಡಿಮೆ ಪೆಟ್ಟಿನಿಂದ ಬದುಕುಳಿಯುತ್ತಾರೆಂದುಕೊಳ್ಳೋಣ. ಆತ ಯಾವ ರೀತಿ ಬದುಕುಳಿಯುತ್ತಾನೆಂದರೆ ಆತನಿಗೆ ಏನೂ ಮಾಡುವುದಕ್ಕಾಗುವುದಿಲ್ಲ, ಆತನೊಬ್ಬ ಜೀವಂತ ಶವದಂತಿರುತ್ತಾನೆ. ಆತನಿಗೆ ಪರಿಹಾರವಾಗಿ ನೀವು ರೂ. 5,000 ಇಲ್ಲವೇ ರೂ. 10,000 ಕೊಡುತ್ತೀರಿ. ಆನೆ ತುಳಿಯುವಾಗ ಆತ ಸಾಯುವಂತೆ ತುಳಿದಿದ್ದರೆ ಪರಿಹಾರವಾಗಿ ಆತನಿಗೆ ಒಂದು ಲಕ್ಷ ರೂಪಾಯಿ ಸಿಗುತ್ತಿತ್ತು. ಇದು ಆನೆಯ ತಪ್ಪಲ್ಲ ! ಆದರೆ, ಆನೆ ಆತನನ್ನು ಪೂರ್ತಿ ಸಾಯಿಸದೆ ಅರ್ಧ ಸಾಯಿಸಿ ಹೊರಟುಹೋಗುತ್ತದೆ. ಆನಂತರ ಪರಿಹಾರ ಒದಗಿಸಿಕೊಡುವಾಗ ತುಂಬಾ ಪ್ರೊಸೀಜರ್ ಇದೆ, ಅಷ್ಟು ಸುಲಭವಾಗಿ ಪರಿಹಾರ ಸಿಕ್ಕುವುದಿಲ್ಲ. ಸತ್ತವರಿಗೂ ಸಿಕ್ಕುವುದಿಲ್ಲ, ಜೀವಂತ ಶವವಿದ್ದಂಥವರಿಗೂ ಸಿಕ್ಕುವುದಿಲ್ಲ. ಅದಕ್ಕೋಸ್ಕರವಾಗಿಯೇ ಹಿಂದೊಮ್ಮೆ ನಾನು ಪ್ರಸ್ತಾಪಿಸಿದ್ದೆ.ಅಲ್ಲಿನ ಸ್ಥಳೀಯ ಅಧಿಕಾರಿಗಳಿಗೆ ಈ ವಿಚಾರದಲ್ಲಿ ನೀವು ಕಡಿಮೆ ಅಧಿಕಾರ ಕೊಟ್ಟಿದ್ದೀರಿ. ಅವರ ದೃಷ್ಟಿಯಲ್ಲಿ ಅದು ಸರಿಯೊಂದು ಕಂಡುಬಂದರೆ ತಕ್ಷಣಕ್ಕೆ ತಾತ್ಕಾಲಿಕ ಪರಿಹಾರ ಕೊಡುವಂಥ ಒಂದು ವ್ಯವಸ್ಥೆಯಾಗಬೇಕು. ಮತ್ತು ನಿಜವಾಗಿಯೂ ಆನೆ ತುಳಿತಕ್ಕೆ ಸಿಕ್ಕಿ ವ್ಯಕ್ತಿಯೊಬ್ಬ ಅಂಗವಿಕಲನಾದರೆ, ಮುಂದೆ ಆತ ಯಾವುದೇ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದಾಗ ಆತನಿಗೂ ಪರಿಹಾರವಾಗಿ ಒಂದು ಲಕ್ಷ ರೂಪಾಯಿಯಷ್ಟು ಹಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಂಬಳೆ ಸುಂದರರಾವ್ : ಆನೆ ತುಳಿಯುವಾಗ ವ್ಯಕ್ತಿ ಸಾಯುವ ಹಾಗೆ ತುಳಿಯುವುದಕ್ಕೆ ಸರ್ಕಾರದಲ್ಲೇನಾದರೂ ವ್ಯವಸ್ಥೆ ಇದೆಯೇ ?

ಶ್ರೀ ಡಿ.ಮಂಜುನಾಥ್ : ಮಾನ್ಯ ಸದಸ್ಯರಾದ ಶಿವಪ್ಪನವರು ಕೇಳಿರುವಂತೆ ಆನೆ ತುಳಿತಕ್ಕೆ ಸಿಕ್ಕು ಸತ್ತವರಿಗೆ ಹಾಗೂ ಸಾಯದೆ ಅಂಗವಿಕಲರಾದವರಿಗೆ ಇಂತಿಷ್ಟು ಪರಿಹಾರ ಕೊಡಬೇಕೆಂದು ನಾವು ನಾರ್ಮ್ಸ್ ಇಟ್ಟುಕೊಂಡಿದ್ದು ಅದರಂತೆ ಹಣ ಕೊಡುತ್ತೇವೆ. ಪರಿಹಾರ ಕೊಡುವಲ್ಲಿ ತಡವಾಗಬಾರದು, ಜಾಗ್ರತೆಯಾಗಿ ಕೊಡಬೇಕೆಂದು ಕೇಳಿರುವುದಕ್ಕೆ ಖಂಡಿತವಾಗಿಯೂ ಜಾಗ್ರತೆಯಾಗಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ : ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಆನೆ ಹಾವಳಿಯಿಂದ ನಮ್ಮಲ್ಲಿ ಬಹಳ ತೊಂದರೆಯಾಗಿದ್ದು ನಾವು ಊರಿಗೆ ಹೋಗುವ ಪರಿಸ್ಥಿತಿ ಇಲ್ಲ. ಆನೆ ತುಳಿತಕ್ಕೊಳಗಾಗಿ ಸತ್ತಿದ್ದಾರೆಂದು ವೈದ್ಯರು ಹಾಗೂ ರೇಂಜರ್ ಅವರು ಸರ್ಟಿಫಿಕೇಟ್ ಕೊಟ್ಟ ನಂತರ ಮತ್ತೇನು ಡಾಕ್ಯುಮೆಂಟ್ ಕೊಡಬೇಕಾಗಿದೆ ? ಇದರ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಪರಿಹಾರದ ಹಣ ಕೊಡದೆ ಈ ತರಹ ಸತಾಯಿಸುವುದು ಸರಿಯಲ್ಲ. ಕಳೆದ ಮೂರು ತಿಂಗಳುಗಳಿಂದ ಆನೆ ತುಳಿತಕ್ಕೆ ಸಿಕ್ಕು ಸತ್ತವರಿಗೆ ಪರಿಹಾರವಾಗಿ ಒಂದು ಪೈಸೆಯಷ್ಟು ಹಣವನ್ನೂ ಕೊಟ್ಟಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಆನೆ ತುಳಿತಕ್ಕೊಳಗಾಗಿ ಸತ್ತಿರುವ ವ್ಯಕ್ತಿಗಳ ಬಗ್ಗೆ ದಾಖಲಾತಿಗಳು ಬರಲಿಲ್ಲವೆಂದರೆ ನಾವು ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಮಾನ್ಯ ಸಚಿವರು ಹೇಳುವುದಾದರೆ ಸತ್ತಿದ್ದಾರೆಂದು ಯಾರು ಹೇಳಬೇಕು? ತಾವು ಇದರ ಬಗ್ಗೆ ಸರ್ಕಾರಕ್ಕೆ ಹೇಳಬೇಕು. ಏಕೆಂದರೆ, ಆನೆ ತುಳಿತಕ್ಕೆ ಸಿಕ್ಕಿ ಸತ್ತ ತಕ್ಷಣವೇ ಪೋಲೀಸ್‌ನವರು ಮಹಜರು ನಡೆಸುತ್ತಾರೆ, ಅರಣ್ಯ ಇಲಾಖಾ ಸಿಬ್ಬಂದಿ ಮಹಜರು ಮಾಡುತ್ತಾರೆ ಮತ್ತು ಪಶುವೈದ್ಯ. ಇಲಾಖೆಯ ವೈದ್ಯರೂ ಹಾಗೂ ಮನುಷ್ಯರನ್ನು ಪರೀಕ್ಷಿಸುವ ವೈದ್ಯರು ಸಹ ಬಂದು ಮಹಜರು ನಡೆಸಿ ಸತ್ತಿದ್ದಾರೆಂದು ಸರ್ಟಿಫಿಕೇಟ್ ಕೊಟ್ಟ ಬಳಿಕ ಇವರಿಗೆ ಯಾವ ತರಹದ ದಾಖಲಾತಿಯನ್ನು ನಾವು ಒದಗಿಸಬೇಕು?

ಅಧ್ಯಕ್ಷರು : ನೀವು ಹೇಳಿದ್ದೇ ದಾಖಲಾತಿಗಳು. ನೀವು ಹೇಳಿದ ಎಲ್ಲಾ ದಾಖಲಾತಿಗಳಲ್ಲಿ ಯಾವುದಾದರೊಂದು ಇಲ್ಲದಿದ್ದರೆ ಅದನ್ನು ಕೊಡಬೇಕಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್ : ಯಾವುದಾದರೊಂದು ಇಲ್ಲದಿದ್ದರೆ ಆನೆಯೇ ಇಲ್ಲವೆಂದು ಇವರು ಹೇಳಬೇಕು. ಸರ್ಕಾರದಿಂದಲೇ ಈ ತರಹದ ಬೇಜವಾಬ್ದಾರಿ ಉತ್ತರ ಸಿಕ್ಕಿದರೆ ಆನೆಗಳೇ ನೇರವಾಗಿ ಮಂತ್ರಿಗಳ ಮನೆ ಹತ್ತಿರಕ್ಕೆ ಬರುತ್ತವೆ. ಈಗ ಬೆಂಗಳೂರು ಪಟ್ಟಣದವರೆಗೂ ಬಂದಿದೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ನಿಜಕ್ಕೂ ಆನೆ ಮಂತ್ರಿಗಳ ಮನೆ ಹತ್ತಿರ ಬರುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೆ, ಆನೆ ತುಳಿತಕ್ಕೊಳಗಾಗಿ ಸತ್ತವರಿಗೆ ಪರಿಹಾರ ಕೊಡುವುದಕ್ಕಿಂತ ಮುಖ್ಯವಾಗಿ ಕಳೆದ ನಾಲ್ಕೈದು ವರ್ಷಗಳಿಂದ ಆನೆಗಳು ಹಾಗೂ ಇತರ ಕಾಡು ಪ್ರಾಣಿಗಳೆಲ್ಲವೂ ಕಾಡು ಬಿಟ್ಟು ಬಯಲು ಪ್ರದೇಶಕ್ಕೆ ಬರಲು ಕಾರಣವೇನೆಂದು ಮೊದಲು ನಾವು ಆಲೋಚಿಸಬೇಕು. ಸಾಯಿಸುವುದು, ಬದುಕಿಸುವುದು ಅನಂತರದ ಪ್ರಶ್ನೆ. ಕಾಡಿನಲ್ಲಿ ಸಿಗುವ ಸೌಲಭ್ಯದಿಂದ ವಂಚಿತವಾಗಿ ಕಾಡಿನಲ್ಲಿ ವಾಸಿಸುವ ಪ್ರಾಣಿಗಳೆಲ್ಲವೂ ಹೊರಗಡೆ ಬರುತ್ತಿರುವುದರಿಂದ ಅವುಗಳಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡುವುದರ ಮೂಲಕ ಕಾಡು ಪ್ರಾಣಿಗಳು ಕಾಡು ಬಿಟ್ಟು ಹೊರಗೆ ಬಾರದಂತೆ ಸರ್ಕಾರ ತ್ವರಿತವಾಗಿ ಕಾರ್ಯಕ್ರಮ ರೂಪಿಸಿಕೊಂಡಿರೆ ಮಾತ್ರಾ ಸಾಧ್ಯವೆಂದು ಹೇಳುತ್ತಿದ್ದೇನೆ. ಕಬ್ಬಿನ ಗದ್ದೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಾಡು ಹಂದಿಗಳಿದ್ದು, ಇವುಗಳಿಂದ ಹಾನಿಗೊಂಡವರಿಗೆ, ಸತ್ತವರಿಗೆಲ್ಲರಿಗೂ ಯಾವುದೇ ಸರ್ಕಾರವಿದ್ದರೂ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾಡು ಹಂದಿಗಳನ್ನು ಸಾಯಿಸುವುದಕ್ಕೆ ಸರ್ಕಾರ ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಅರಣ್ಯ ಸಚಿವರು ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಈ ವಿಷಯ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಆದುದರಿಂದ, ಈ ವಿಚಾರದಲ್ಲಿ ತಾವು ಹೊಸದಾಗಿ ಆಲೋಚಿಸಿ ಕಾಡು ಪ್ರಾಣಿಗಳು ಕಾಡು ಬಿಟ್ಟು ಹೊರಗೆ ಬಾರದೆ, ಅವುಗಳು ಕಾಡಿನಲ್ಲೇ ವಾಸಿಸುವಂತೆ ಯಾವುದಾದರೂ ಯೋಜನೆಯನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಸಾಧ್ಯ ಹೊರತು ಆನೆ ತುಳಿದು ಸತ್ತವರಿಗೆ ಲಕ್ಷ ಲಕ್ಷ ರೂಪಾಯಿಗಳಂತೆ ಪರಿಹಾರ ಕೊಟ್ಟುಕೊಂಡು ಹೋದರೆ ಅಷ್ಟೊಂದು ಹಣವನ್ನು ಎಲ್ಲಿಂದ ಕೊಡುವುದಕ್ಕೆ ಸಾಧ್ಯ ?

ಶ್ರೀ ಡಿ.ಮಂಜುನಾಥ : ಕಬಿನಿ, ಹಾರಂಗಿ ಹಾಗೂ ನುಗು ಸ್ಥಳಗಳೇ ಆನೆಗಳು ವಾಸಿಸುವ ತಾಣಗಳಾಗಿವೆ. ಈ ಸ್ಥಳಗಳಲ್ಲಿ ಯೋಜನೆಗಳನ್ನು ನಿರ್ಮಿಸಿದ ನಂತರ ವಾಸಿಸುವುದಕ್ಕೆ ಅವುಗಳಿಗೆ

ಜಾಗವಿಲ್ಲದಿರುವುದರಿಂದ ಅರಣ್ಯ ಬಿಟ್ಟು ಹೊರಕ್ಕೆ ಬರುತ್ತಿವೆ. ಮಾನ್ಯ ಸದಸ್ಯರು ಹೇಳಿದಂತೆ ಅವುಗಳು ಕಾಡಿನಲ್ಲಿಯೇ ವಾಸಿಸುವುದಕ್ಕೆ ನಾವು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಆನೆಗಳಿಗೆ ಮುಖ್ಯವಾಗಿ ಸೊಪ್ಪು ಹಾಗೂ ನೀರು ಬೇಕಿರುವುದರಿಂದ, ಕೆಲವು ಕಡೆಗಳಲ್ಲಿ ಮರಗಳನ್ನು ಕಡಿದು ಸೊಪ್ಪು ಒದಗಿಸುತ್ತಿದ್ದೇವೆ. ನೀರಿನ ಸೌಲಭ್ಯ ಒದಗಿಸುವುದಕ್ಕೂ ಕೆಲವು ಕಡೆ ಚೆಕ್ ಡ್ಯಾಮ್‌ಗಳನ್ನು ಮಾಡುತ್ತಿದ್ದೇವೆ. ಇವೆರಡು ಸೌಲಭ್ಯವನ್ನು ಒದಗಿಸಿದರೆ ಅವು ಕಾಡು ಬಿಟ್ಟು ಹೊರಗಡೆ ಬರುವುದಿಲ್ಲ

ಬಾದಾಮಿ ತಾಲ್ಲೂಕಿನಲ್ಲಿ ರಸ್ತೆ ಡಾಂಬರೀಕರಣ

127 (891) ಶ್ರೀ ಚಿಮ್ಮನಕಟ್ಟಿ ಬಾಲಪ್ಪ ಭೀಮಪ್ಪ (ಬಾದಾಮಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬಾದಾಮಿ ತಾಲ್ಲೂಕಿನ ಗೋವನ ಕೊಪ್ಪ ಹೆಬ್ಬಳ್ಳಿ-ಚೊಳಚಗುಡ್ಡ ರಸ್ತೆಗಳು ಯಾವ ದಿನಾಂಕದಿಂದ ಲೋಕೋಪಯೋಗಿ ಇಲಾಖೆಗೆ ವ್ಯಾಪ್ತಿಗೆ ಒಳಪಟ್ಟಿತ್ತು.

(ಆ) ಅಂದಿನಿಂದ ಇಂದಿನವರೆಗೆ ಈ ರಸ್ತೆ ಕಾಮಗಾರಿಗಳಿಗೆ ಖರ್ಚು ಮಾಡಲಾದ ಹಣ ಎಷ್ಟು ?

(ಇ) ಡಾಂಬರೀಕರಣ ಮಾಡಲಾದ ರಸ್ತೆಯಉದ್ದವೆಷ್ಟು ಇನ್ನೂಳಿದ ಭಾಗದ ಡಾಂಬರೀಕರಣಕ್ಕಾಗಿ ಈ ವರ್ಷ ಬಿಡುಗಡೆ ಮಾಡಲಾದ ಹಣ ಎಷ್ಟು ?

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) :

(ಅ) ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 432 : ಸಿಎಸ್‌ಆರ್ : 85, ಬೆಂಗಳೂರು ದಿನಾಂಕ 04.07.1987ರ ಪ್ರಕಾರ ಬಾದಾಮಿ ತಾಲ್ಲೂಕಿನ ಚೊಳಚಗುಡ್ಡ ಗೋವನ ಕೊಪ್ಪ ರಸ್ತೆಯ ಜಿಲ್ಲಾ ಮುಖ್ಯರಸ್ತೆ ಎಂದುಮೇಲ್ದರ್ಜೆಗೇರಿದ್ದು, ಅಂದಿನಿಂದಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದೆ.

(ಆ) ಅಂದಿನಿಂದ ಇಂದಿನವರೆಗೆ ಈ ರಸ್ತೆ ಖರ್ಚು ಮಾಡಿದ ವಿವರ ಕೆಳಕಂಡಂತಿದೆ :-

		(ಲಕ್ಷ ರೂ.ಗಳಲ್ಲಿ)
1)	ಲೆಕ್ಕ ಶೀರ್ಷಿಕೆ-''5054 ರಸ್ತೆ ಮತ್ತು ಸೇತುವೆ (ಯೋಜನೆ)	- 10.68
2)	''5054-ಶಾಸಕರ ಅನುದಾನ ಅಡಿ	- 8.71
3)	''3054-ರಸ್ತೆ ಮತ್ತು ಸೇತುವೆ (ಯೋಜನೇತರ)	- 15.51
	ಒಟ್ಟು	**34.90 ಲಕ್ಷ ರೂ**

(ಇ) ಈ ರಸ್ತೆಯ ಒಟ್ಟು ಉದ್ದ 27.00 ಕಿಮೀಇದ್ದು, ಈವರೆಗೆ ಡಾಂಬರೀಕರಣ ಮಾಡಲಾದ ರಸ್ತೆ ಉದ್ದ 13.90 ಕಿಮೀ. ಇರುತ್ತದೆ 1998-99ನೇ ಸಾಲಿಗೆ 2.30 ಲಕ್ಷ ರೂ.ಗಳ